ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ತಪ್ಪಾಗಿ ತಿಳಿದ ಹಾಗೆ ರಾಣೆಬೆನ್ನೂರು ನಗರದ ವ್ಯಾಪ್ತಿಯ ಬಗ್ಗೆ ಸರ್ಕಾರಕ್ಕೆ ತಪ್ಪು ಮಾಹಿತಿ ಬಂದಿದೆ ಎಂದು ನನ್ನ ಭಾವನೆ. ರಾಣೆಬೆನ್ನೂರು ನಗರದ ವ್ಯಾಪ್ತಿ ಪೂರ್ವಪಶ್ಚಿಮವಾಗಿ ಸುಮಾರು ಐದಾರು ಕಿಲೋಮೀಟರ್ ದೂರ ಇದೆ. ಅಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಬೇಕಾದರೆ ಬಹಳ ದೂರ ನಡೆಯಬೇಕಾಗುತ್ತದೆ. ಅಲ್ಲಿ ಕಲಾ ಮತ್ತು ವಾಣಿಜ್ಯ ಕಾಲೇಜು ವಿದ್ಯಾರ್ಥಿಗಳು ಸುಮಾರು ೧೧೦೦ ಜನ ಇದ್ದಾರೆ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ೫೦೦ ಜನ ಇದ್ದಾರೆ. ಇವರು ಪ್ರತಿನಿತ್ಯ ತಮ್ಮ ಸಾರಿಗೆ ಬಸ್‌ಗಳ ಮೇಲೆ ಕುಳಿತು ಕೊಂಡು ಹೋಗತಕ್ಕ ಪರಿಸ್ಥಿತಿ ಇದೆ. ಆದಕ್ಕೋಸ್ಕರ ಸರಕಾರದವರು ಮನಸ್ಸು ಮಾಡಿ, ಉಪನಗರ ಸಾರಿಗೆ ಬಸ್ ವಿಸ್ತರಿಸಿ ಮಾಡುತ್ತೇನೆ ಎಂದು ಏನು ಹೇಳಿದ್ದೀರಿ, ಇದರಲ್ಲಿ 'ಉಪ' ಎಂಬ ಪದವನ್ನು ತೆಗೆದುಬಿಟ್ಟು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿ ಕೊಟ್ಟರೆ ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ.

ಅಧ್ಯಕ್ಷರು.—ಅಲ್ಲಿಯ ಜನಸಂಖ್ಯೆ ಎಷ್ಟು ಎಂದು ಹೇಳಿದ್ದೀರಲ್ಲ.

ಶ್ರೀ ಕೆ.ಬಿ. ಕೋಳಿವಾಡ್.—ಅಲ್ಲಿ ಸುಮಾರು ಎಂಭತ್ತು ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದೆ.

ಶ್ರೀ ವೀರಣ್ಣ (ಸಾರಿಗೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಮಾಹಿತಿ ಇದೆ. ಸಿಟಿ ಸರ್ವಿಸ್ ಇಂಟ್ರಡ್ಯೂಸ್ ಮಾಡಬೇಕಾದರೆ ಅದು ಪಟ್ಟಣ ಆಗಿರಬೇಕು, ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರಬೇಕು. ಈಗಿನ ಮಾಹಿತಿ ಪ್ರಕಾರದಲ್ಲಿ ೭೨,೬೫೦ ಜನಸಂಖ್ಯೆ ಇದೆ, ಒಂದು ಲಕ್ಷವೂ ಇಲ್ಲ. ಆದರೂ ಕೂಡಾ ಸಿಟಿ ಸರ್ವಿಸ್, ಉಪನಗರ ಸಾರಿಗೆ ಸರ್ವಿಸ್, ರೂರಲ್ ಏರಿಯಾ ಸರ್ವಿಸ್ ಇದು ಬೇರೆ ಬೇರೆ ಇದ್ದರೂ ಸಹ ಕೇವಲ ಚಾರ್ಜಸ್‌ನಲ್ಲಿ ವ್ಯತ್ಯಾಸ ಇದೆಯೇ ಹೊರತು ನೀವು ಕೇಳಿರತಕ್ಕ ಸೌಕರ್ಯ ಇದರಿಂದ ಸಿಗುತ್ತದೆ. ನೀವು ಕೇಳಿದುದನ್ನು ಒಪ್ಪಿಕೊಂಡು ಅಲ್ಲಿ ಉಪನಗರ ಸಾರಿಗೆ ಬಸ್ ಸೌಕರ್ಯ ವಿಸ್ತರಿಸಿ, ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಅನುಕೂಲ ಆಗುವ ರೀತಿಯಲ್ಲಿ ಒಂದೆರಡು ಬಸ್‌ಗಳನ್ನು ಬಿಟ್ಟು ೫-೧೦ ಕಿಲೋಮೀಟರ್ ದೂರ ಬಸ್ ಓಡಿಸುವುದಲ್ಲದೆ, ವಿದ್ಯಾರ್ಥಿಗಳಿಗೆ ಪಾಸ್ ವ್ಯವಸ್ಥೆ ಸಹ ಮಾಡಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಸಚಿವರಿಗೆ ಈ ನಗರದ ಬಗ್ಗೆ ತಪ್ಪು ಮಾಹಿತಿ ಬಂದಿದೆ ಎಂದು ಕಾಣುತ್ತಿದೆ. ಇದು ಸಿಟಿಯಾಗಿ ಪರಿವರ್ತನೆಯಾಗಿದೆ. ತಮ್ಮ ಹತ್ತಿರ ಇರುವ ಅಂಕಿಸಂಖ್ಯೆ ಹಿಂದಿನ ಅಂಕಿಸಂಖ್ಯೆ ಎಂದು ಕಾಣುತ್ತಿದೆ. ಅಲ್ಲಿಯ ಜನಸಂಖ್ಯೆ ಒಂದು ಲಕ್ಷದ ಸಮೀಪಕ್ಕೆ ಬಂದಿದೆ. ಅಲ್ಲಿ ೮೦ ಸಾವಿರಕ್ಕೂ ಮೇಲ್ಪಟ್ಟು ಜನಸಂಖ್ಯೆ ಇದೆ. ಸಿಟಿಯಾಗಿ ಪರಿವರ್ತನೆ ಹೊಂದಿದೆ. ವಿದ್ಯಾರ್ಥಿಗಳ ಸಲುವಾಗಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿ ನಗರ ಸಾರಿಗೆ ಬಸ್‌ಗಳನ್ನು ಹೊರಡಿಸಿದರೆ ಅನುಕೂಲವಾಗುತ್ತದೆ ಎಂದು ಅಧ್ಯಕ್ಷರ ಮುಖಾಂತರ ಹೇಳುತ್ತೇನೆ.

MR. SPEAKER.—Please examine it. ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ವೀರಣ್ಣ.—ಪರಿಶೀಲಿಸುತ್ತೇನೆ ಎಂಬುದು ನನ್ನ ಉತ್ತರದಲ್ಲಿ ಬರುವುದಿಲ್ಲ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆ ಎಂದು ಹೇಳಿ.

ಶ್ರೀ ಕೆ.ಬಿ. ಕೋಳಿವಾಡ್.—ಪರಿಶೀಲನೆ ಮಾಡುವುದೇ ಅಲ್ಲ, ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವೀರಣ್ಣ.—ಪರಿಶೀಲನೆ ಮಾಡುತ್ತೇನೆ ಎಂಬ ಪ್ರಶ್ನೆಯೇ ಬರುವುದಿಲ್ಲ.

ಕಡೂರು ತಾಲ್ಲೂಕಿನ ಸಾರ್ವತ್ರಿಕ ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಹೆಚ್ಚಿಸುವುದು

೫೨೨ (೧೭೦) ಶ್ರೀ ಪಿ.ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಡೂರು ತಾಲ್ಲೂಕಿನ ಸಾರ್ವತ್ರಿಕ ಆಸ್ಪತ್ರೆಯಲ್ಲಿರುವ ಪ್ರಸೂತಿ ಗೃಹದಲ್ಲಿ ಹಾಸಿಗೆಗಳ ಜೊತೆಗೆ ೫೫ ಹಾಸಿಗೆ ಪ್ರಸೂತಿ ಗೃಹಗಳನ್ನು ಜಾಸ್ತಿ ಮಾಡಲು ಕೇಳಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಕಡೂರು ರೋಟರಿ ಕ್ಲಬ್‌ನವರು ಹೆಚ್ಚುವರಿ ೨೫ ಹಾಸಿಗೆಗಳ ಬಾಬ್ತು ಅರ್ಧ ಭಾಗ ಹಣ ಕೊಡಲು ಮುಂದೆ ಬಂದಿರುವುದರಿಂದ ಸರ್ಕಾರದವರು ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ?

ಇ) ಹಾಗಿದ್ದಲ್ಲಿ ೧೯೮೭-೮೮ನೇ ಸಾಲಿಗೆ ಮಂಜೂರು ಮಾಡಲಾಗುವುದೇ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಆ) ೨೫ ಹಾಸಿಗೆಗಳ ಪ್ರಸೂತಿ ಗೃಹಗಳನ್ನು ಮಂಜೂರು ಮಾಡಲು ಮನವಿ ಬಂದಿಲ್ಲ. ಆದರೆ ಅದರ ಹಾಸಿಗೆ ಸಂಖ್ಯೆಯನ್ನು ೫೦ಕ್ಕೆ ಏರಿಸಿ ಮಂಜೂರಾತಿ ನೀಡಲು ಮನವಿ ಬಂದಿದೆ.

ಆ) ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಾಮಾನ್ಯವಾಗಿ ೩೦ ಹಾಸಿಗೆಗಳನ್ನು ಒದಗಿಸುವುದು ಸರ್ಕಾರದ ನೀತಿಯಾಗಿದೆ. ಆದರೂ ಸ್ಥಳೀಯರಿಂದ ಮನವಿಗಳು ಬಂದಿರುವುದರಿಂದ ಹಾಗೂ ರೋಟರಿ ಕ್ಲಬ್‌ನವರು ಹೆಚ್ಚುವರಿ ಹಾಸಿಗೆಗಳ ಕಟ್ಟಡ ನಿರ್ಮಾಣದ ಅರ್ಧ ದಷ್ಟು ವೆಚ್ಚವನ್ನು ಭರಿಸಲು ಸಿದ್ಧರಿರುವುದರಿಂದ ಈ ವಿಷಯವನ್ನು ಪರಿಶೀಲಿಸ ಲಾಗುವುದು.

ಇ) ೧೯೮೭-೮೮ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಇದನ್ನು ಪರಿಶೀಲಿಸ ಲಾಗುವುದು.

ಶ್ರೀ ಪಿ. ಬಿ. ಓಂಕಾರಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರಕ್ಕೆ ಮನವಿ ಬಂದಿದೆಯೆಂದು ಹೇಳಿದ್ದಾರೆ. ಇಂತಹ ಮನವಿಗಳನ್ನು ನಾವು ಕಳೆದ ಎರಡು ಮೂರು ವರ್ಷ ಗಳಿಂದಲೂ ಸಹ ಮಾಡಿಕೊಂಡು ಬಂದಿದ್ದೇವೆ. ಆದರೆ ಯಾವ ಪ್ರಯೋಜನ ಕೂಡ ಆಗಿಲ್ಲ. ಮಾನ್ಯ ಮಂತ್ರಿಗಳು ಸ್ಥಳಕ್ಕೆ ಬಂದಿದ್ದರು. ಅಲ್ಲಿನ ಪರಿಸ್ಥಿತಿಯನ್ನು ಅವರು ಸಹ ನೋಡಿಕೊಂಡು ಬಂದಿದ್ದಾರೆ. ಮತ್ತೆ ಅಲ್ಲಿನ ರೋಟರಿ ಕ್ಲಬ್‌ನವರು ಈಗ ಮುಂದೆ ಬಂದಿದ್ದಾರೆ. ಆದ್ದರಿಂದ ೧೯೮೭ನೇ ಇಸವಿಯಲ್ಲಾದರೂ ಸರ್ಕಾರ ನಮ್ಮ ಮನವಿಯನ್ನು ಪರಿಶೀಲಿಸಿ ೫೦ ಹಾಸಿಗೆಗಳ ಆಸ್ಪತ್ರೆ ಯನ್ನು ಮಾಡಿಕೊಡುತ್ತಾರೆಯೇ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಸಚಿವರು).—ಮಾನ್ಯ ಅಧ್ಯಕ್ಷರೇ ಈಗಿನ ಸರ್ಕಾರದ ನೀತಿಯ ಪ್ರಕಾರ ೫೦ ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡು ವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಅಲ್ಲಿನ ರೋಟರಿ ಕ್ಲಬ್‌ನವರು ಮುಂದೆ ಬಂದು ಅರ್ಧದಷ್ಟು ಹಣವನ್ನು ಕಟ್ಟಡಕ್ಕೆ ಕೊಡುತ್ತೇವೆಂದು ಹೇಳಿರುವುದರಿಂದ ೩೦ ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡುವ ಉದ್ದೇಶ ಸರ್ಕಾರಕ್ಕೆ ಇದೆ.

ಬೀಳಗಿಯಲ್ಲಿ ನ್ಯಾಯಾಲಯದ ಸ್ಥಾಪನೆಯ ಬಗ್ಗೆ

೫೪ (೬೨) ಶ್ರೀ ಬಾಬುರೆಡ್ಡಿ ತುಂಗಳ್, (ಬೀಳಗಿ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ನ್ಯಾಯಾಲಯದ ಸೌಲಭ್ಯವಿಲ್ಲದ ತಾಲ್ಲೂಕುಗಳು ಎಷ್ಟು ?

ಆ) ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನಲ್ಲಿ ನ್ಯಾಯಾಲಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಅಲ್ಲಿ ನ್ಯಾಯಾಲಯ ಸ್ಥಾಪನೆ ಮಾಡಲು ವಿಳಂಬಕ್ಕೆ ಕಾರಣವೇನು ?